ಅವರ ಬಲಗೈ ಹಿಡಿಯುತ್ತಾ, “ಹಂಗನ್ನಬೇಡಿ ಪದ್ಮಕ್ಕ, ಏನೋ ನಮ್ಮೂರು ಹೊಳೆಗಿಂತ ತುಸು ಮೇಲಕ್ಕಿದೆ. ನಿಮ್ಮೂರು ಅದೇ ಮಟ್ಟಕ್ಕೆ, ಗಂಗೆ ನುಗ್ಗಿ ಬಂದ್ರೆ ಯಾರೇನ್ಮಾಡಕ್ಕಾಗುತ್ತೆ, ಏನೂ ಯೋಚ್ನೆ ಮಾಡಬೇಡಿ. ನಿಮ್ಮ ಸಾಮಾನು ಸರಂಜಾಮು ಎಲ್ಲ ಇಳಿಸಿ ಜಗಲಿಯಂಚಿನ ಕೋಣೇಲಿ ಇಡಕ್ಕೆ ಹೇಳಿದೀನಿ, ನಂಜುಂಡಂಗೆ. ನೀವಿಲ್ಲಿ ಬನ್ನಿ, ಮಲಗಿ” ಎನ್ನುತ್ತಾ ತಾನು ಆವರೆಗೆ ಮಲಗಿದ್ದ ನಾಗಾಲಿಯನ್ನೇ ಬಿಟ್ಟುಕೊಟ್ಟು ಒಳಕೋಣೆಗೆ ಹೋಗಲನುವಾಗಿ... ಇದ್ದಕ್ಕಿದಂತೆ ಅವಳತ್ತ ತಿರುಗಿ, “ಪದ್ಮಕ್ಕ, ರಾಮಣ್ಣ ಎಲ್ಲಿ?” ಎಂದಳು. “ಅವರೆಲ್ಲಿರ್ತಾರೆ ಶಾರದೆ? ಬೆಂಗಳೂರಿಗೋಗಿ ನಾಕು ದಿನ ಆಯ್ತು. ಮನೆಯಲ್ಲಿ ಹೆಣ್ಣೆಂಗ್ಸು ಒಬ್ಬಳೇ... ಒಕ್ಕಲುತನ, ದನ ಕರ ಇವೆಲ್ಲ ಗ್ಯಾನ ಇದ್ದಿದ್ರೆ ನಮ್ಮ ಬಾಳ್ಯಾಕೆ ಹಿಂಗಾಗಬೇಕಿತ್ತು?” ಎನ್ನುವಷ್ಟರಲ್ಲಿ ದುಃಖ ಒತ್ತರಿಸಿ ಕೊರಳು ಬಿಗಿದು ಬಂತು. ಶಾರದೆಗೂ ಏನು ಮಾತು ತೋಚದೆ, “ಹೋಕ್ಕಳಿ ಬಿಡಿ, ನಮ್ಮ ಹಳ್ಳಿ ಹೆಣ್ಣುಮಕ್ಕಳ ಪಾಡು ಇಷ್ಟೇ ಕಣಂತೆ, ಕಟ್ಟಿಕೊಂಡ ತಪ್ಪಿಗೆ ಬದುಕು ಮಾಡ್ಲೇಬೇಕಲ್ಲ.” ಎಂದು ಇದ್ದಕ್ಕಿದಂತೆ ನೆನಪಿಸಿಕೊಂಡವಳಂತೆ, “ಎಲ್ಲಿ ರಮೇಶ ಕಾಣ್ತಿಲ್ಲ?” ಎಂದಳು. “ಈ ಸಾರಿ ಅವನ್ನೂ ಕರ್ಕೊಂಡು ಅವರ ತಂಗಿ ಮನೆಗೆ ಹೋಗಿ ಕೂತಿದಾರೆ, ಮಳೆ ಹೆಚ್ಚಾಗಿ ರಜೆ ಕೊಟ್ರಲ್ಲ ಇಸ್ಕೂಲಿಗೆ. ಇಲ್ಲದಿದ್ರೂ ಈ ಪಾಟಿ ಹೊಳೆ ಬಂದ್ರೆ ಇಸ್ಕೂಲಿಗೆ ಕಳಿಸೋದಾದ್ರೂ ಹೆಂಗೆ?” ಎಂದವಳನ್ನು ತದೇಕವಾಗಿ ನೋಡುವಾಗ... ಇಬ್ಬರ ಹೃದಯದ ದುಃಖಗಳು ಒಂದೇ ತೆರನಾದ್ದು ಎನಿಸಿ, ನೀರು ತನ್ನ ಮಟ್ಟವನ್ನು ಕಂಡುಕೊಳ್ಳುವಂತೆ ತಾವಿಬ್ಬರು ಒಂದೇ ಹಣೆಪಾಡಿನವರು ಎನಿಸಿಬಿಟ್ಟಿತು. ಆ ಇರುಳ್ಗತ್ತಲೆಯ ಲಾಟೀನು ಬೆಳಕಲ್ಲಿ ಗೋಡೆಯಲ್ಲಿ ಅಕರಾಳ ವಿಕರಾಳ ತೋರುವ ಅವರಿಬ್ಬರ ನೆರಳಿನ ಚಿತ್ರಗಳನ್ನು ನೋಡುತ್ತಾ, “ಅದ್ಸರಿ ಪದ್ಮಕ್ಕ... ಹೊಟ್ಟೆಗೇನಾರೂ ಮಾಡ್ಕಂಡಿದೀಯ, ಹೆಂಗೆ?” ಎಂದಾಗ, “ನಿಜ ಹೇಳ್ಬೇಕಂದ್ರೆ... ಏನೂ ತಿಂದಿಲ್ಲ ಶಾರದೆ, ಸಂಜೆಯಿಂದಲೇ ಬೇಕು ಬೇಕಾದ್ದನ್ನು ಅಟ್ಟದ ಮೇಲಿರಿಸಿ, ಮನೆಯ ದೇವರು ದೀಪ, ಚಿನ್ನಬೆಳ್ಳಿಗಳನ್ನು ಗಂಟು ಕಟ್ಟಿಕೊಂಡು ಮಳೆ ನೀರಿಗೆ ಆದಷ್ಟೂ ಸಿಗದಂತೆ ದವಸ ಧಾನ್ಯಗಳನ್ನು ಬಂದೋಬಸ್ತಾಗಿ ಮಾಡಿ, ಕೈಗೆ ಸಿಕ್ಕಷ್ಟು ಗಂಟು ಕಟ್ಟಿಕೊಂಡು, ಕಮಾನು ಗಾಡಿಯನ್ನು ಹೂಡಿಸಿ ಇಲ್ಲಿ ಬರೋಷ್ಟರಲ್ಲಿ ಇಷ್ಟೊತ್ತಾಯ್ತು” ಎಂದಳು ಸೋತ ದನಿಯಲ್ಲಿ. “ಬಾ ಪದ್ಮಕ್ಕ ಏಳು, ಕೈಕಾಲು ತೊಳಕೊ. ಒಂದಿಷ್ಟು ಅನ್ನ ಸೊಪ್ಪಿನ ಹುಳಿ ಇದೆ. ಬಿಸಿ ಮಾಡಿ ಕಲೆಸಿ ಹಾಕ್ತೀನಿ. ಈಗ ಸದ್ಯಕ್ಕೆ ಅದನ್ನೇ ಸರಿ ಮಾಡ್ಕೊ” ಎಂದು ಮೇಲೆದ್ದವಳನ್ನು ಆಗಂತುಕಳು ಯಾವ ಮುಲಾಜು ಇಲ್ಲದೆ ಹಿಂಬಾಲಿಸಿದಳು. ಚಿಮಣಿ ಎಣ್ಣೆಯ ಲಾಂದ್ರದ ಬೆಳಕಲ್ಲಿ ಊಟ ಮುಗಿಸಿ, ನಡುಮನೆಯ ನಾಗಾಲಿಯಲ್ಲಿ ಅವಳು ಮಲಗಿದ ಮೇಲೆ ತನ್ನ ಕೋಣೆಯ ಮಂಚದಲ್ಲಿ ಉರುಳಿಕೊಂಡ ಶಾರದೆಗೂ ನಿದ್ದೆ ಬರಲಿಲ್ಲ.

ಹೇಮಾವತಿ ತಮ್ಮೆಲ್ಲರ ಜೀವನದಿ. ತನಗಂತೂ ಜೀವಕ್ಕೆ ಜೀವ. ದಿನಕ್ಕೊಂದು ಬಾರಿ ಹೊಳೆ ಕರೆಗೆ ಹೋಗಿ ಕಲ್ಲ ಮೇಲೆ ಕುಳಿತು ಕಾಲಿಳಿಬಿಟ್ಟು ಮೀನುಗಳು ಕಾಲು ಮುತ್ತುವುದನ್ನೇ ನೋಡುತ್ತಾ ಪುಳಕಗೊಳ್ಳುತ್ತಾ... ತುಲಾ ಮಾಸದಲ್ಲಿ ಕಾವೇರಿ ಸ್ನಾನಕ್ಕೆ ಹೋಗುವ ಪರಿಪಾಠವಿತ್ತು ಕೆಳ್ಳೂರಿನ ಬ್ರಾಹ್ಮಣ ಮುತ್ತೈದೆಯರಿಗೆ. ಶಾರದೆಯಂತೂ ಹೇಮಾವತಿಯನ್ನು ಬಿಟ್ಟು ಬೇರೆಡೆಗೆ ಹೋದದ್ದೇ ಇಲ್ಲ. ಹೊಳೆಯೆಂದರೆ ಅದು ಹೇಮಾವತಿ ಮಾತ್ರ. ಅದರ ಬಾಗು ಬಳುಕು, ಸುಳಿ ತಿರುವು ಇವೇ ಅವಳ ಭಾವಪ್ರಪಂಚ. ಬೇಸಗೆಯ ಹೊಳೆಯಾಟ, ಬೆಳದಿಂಗಳ ಹೊಳೆಯೂಟ ಅವಳ ಭಾವಪ್ರಪಂಚದ ಭಾಗವೇ. ಹೀಗಿರುವಾಗ ತಾನಷ್ಟು ಪ್ರೀತಿಸುವ ಹೇಮಾವತಿ ಹೀಗೆ ಈ ಪರಿ ಕೆರಳಿ ರಕ್ಕಸಿಯಾಗಿ ನಾಲಗೆ ಚಾಚಿ ಎಲ್ಲವನ್ನೂ ಕಬಳಿಸಲು ನಿಂತಳೆಂದರೆ... ಯಾಕೆ ಹೀಗಾಗುತ್ತದೆ. ಜೀವಪ್ರಿಯವೂ ಜೀವಹರವಾಗುವುದು ಯಾಕೆಂದು ಅದೆಷ್ಟು ಬಾರಿ ಅನಿಸುವುದೋ...

ಕಿಟಕಿ ತೆರೆದು ರಪ್ಪ
ನೋಡಿ, ಏರಿರಬಹು
ಕೆಳಗಿರುವಾಗಲೇ ನಾನ
ಸಂಜೆ ಐದಕ್ಕೆ ಫೋನ್
ರಾತ್ರಿ ಒಂಬತ್ತರಿಂದ
ಕಾಯುತ್ತಿರುತ್ತೇನೆ. ನಿ
ಐದು ಮಿನಿಟು. ನೀನ
ನೀನೊಬ್ಬಳು ಬಂದರೆ
ಬಂದೊಡನೆ ಹೊರಟ
ತಾಸಿಗೆ ಬೆಂಗಳೂರು.
ದೆಹಲಿಗೆ ತಲಪಬಹುದ
ತಾನೇ?” ಹೌದೆಂದಿದ್ದ
ಗಂಡ. ಹುಟ್ಟಿದೇ ಇರು
ಇದೇ ಆರುಕಂಬದ ಮ
ಜಾಜಿ, ಪಾರಿಜಾತಗಳ
ಬಹುಶಃ ತಾನೀ
ಪ್ರತಿಫಲಾಪೇಕ್ಷೆಯಿಲ್ಲದ
ಕಡೆಯಪಕ್ಷ ಸಹಚಾರಿ
ಮುನಿಸು, ಕಡೆಯಪಕ್ಷ
ಕೂರದ ಹಸಿರು ಪಸರಿ
ಫಲಭರಿತ ಮರದಂತೆ
ಬಳ್ಳಿಯಂತೆ... ಎಲ್ಲವೂ
ಇದ್ದಕ್ಕಿದಂತೆ ಅವನ
ಉದಿಸುತ್ತಿರಲಿಲ್ಲ. ಅವ
ಹಿಂದಿನ ಬಾಲ್ಯಕಾಲದ
ಹೊಳೆಯಲ್ಲಿ ಅವರಿಬ್ಬ
ಇರದ ಕಾಲದಿಂದ ಸೇತ
ಹೊಳೆಭರತದ ದಿನವ
ಇದ್ದಕ್ಕಿದಂತೆ ದಡಲ್
ಅಲ್ಲದಿದ್ದರೂ ಅದರ ಕ
ಒಂದು ಬಾರಿ ಹೊಳೆ
ಎಲ್ಲೆಡೆ ಕೇಳಿ ಬರುತ್ತಿ
ಓಡಿಬಂದು ಕೋಣೆಯ
ಒಡೆದು ಹೋದಂತಿದೆ”
ಸಂವಹನ ಹೇಮಾವತಿ